ಋ. ಹಾಗಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ. ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಮತ್ತು ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು)

ಅ. ದೇವದುರ್ಗ ತಾಲ್ಲೂಕಿನಲ್ಲಿ 206 ಕೊಳವೆ ಬಾವಿಗಳನ್ನು ಕಳೆದ 3 ವರ್ಷಗಳ ಅವಧಿಯಲ್ಲಿ ಕೊರೆಯಲಾಗಿದೆ.

ಆ. ಅನುಬಂಧ–1ರಲ್ಲಿ ವಿವರಗಳನ್ನು ನೀಡಲಾಗಿದೆ.

ಇ. ಭ್ರಷ್ಟಾಚಾರ ನಡೆದಿರುವ ಬಗ್ಗೆ ಸರ್ಕಾರಕ್ಕೆ ಯಾವುದೇ ವರದಿ ಬಂದಿರುವುದಿಲ್ಲವಾದ್ದರಿಂದ ಯಾವುದೇ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿರುವುದಿಲ್ಲ.

ಅನುಬಂಧ

ಕರ್ನಾಟಕ ವಿಧಾನಸಭೆ ಸದಸ್ಯರಾದ ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :1294ರ ಲಗತ್ತು.

ದೇವದುರ್ಗ ತಾಲ್ಲೂಕಿನಲ್ಲಿ ವಿವಿಧ ಯೋಜನೆಗಳಡಿ ಕೊರೆದಿರುವ ಕೊಳವೆ ಬಾವಿಗಳ ವಿವರಗಳು:

ಊಟಿ–1, ಗೌರಂಪೇಟೆ–2, ಗೋಪಾಲಪೂರು–3, ದೇವರಗುಡ್ಡ–2, ಕಾಮದಾಳ–ಸೂಗದಾಳ–1, ಗಬ್ಬೂರು–7, ಸೋಮನಮರ್ಡಿ–1, ಗುಂಡುಗುರ್ತಿ–1, ತಿಂತಣಿ ಬ್ರಿಡ್ಜ್–2, ಚಿಲಕಲ ದೊಡ್ಡಿ–2, ಚಾರಬಂದಿ –1, ಅಗ್ರಹಾರ–2, ಮಡಿಹಾಳ–2, ಕುರುಬರದೊಡ್ಡಿ–1, ಬೆಂಕಿಭೀಮಯ್ಯನ ದೊಡ್ಡಿ–1, ಬೊಮ್ಮನಾಳ–2, ಎಸ್.ಸಿ.ಕಾಲೋನಿ ದೊಡ್ಡಿ(ಗಲಗ)–1, ಸಡಕಲ ಗುಡ್ಡ–1, ಜಿ.ಇರಬಗೇರ–2, ಕೆ.ಇರಬಗೇರ–6, ಬಂಗಾರದೊಡ್ಡಿ–1, ಮಾಟಲಾರದೊಡ್ಡಿ–1, ಮಾಟಲಾರದೊಡ್ಡಿ–2, ಅನ್ವರ–1, ಬೂದಿನಾಳ–1, ನಾಗರದೊಡ್ಡಿ–1, ಗುಡ್ಡಾರದೊಡ್ಡಿ–1, ಸಲಿಕ್ಯಾಷುರು–1, ಹೇಮನಾಳ–1, ಜಾನಮರ್ಡಿ–1, ದೇವತಗಲ್ ತಾಂಡ–1, ರಾಮದುರ್ಗ–2, ಹೆರೂರು–3, ಮಸರಕಲ್–6, ಅರಕೇರ–7, ಅಂಜಾಳ–1, ಮಲಯಕಲ್–2, ಮುಕ್ಕಲಗುಡ್ಡ ತಾಂಡ–1, ದೇವತಗಲ್–1, ಚಿನ್ನಾಪೂರು ತಾಂಡ–1, ದೇವದುರ್ಗ ಪತ್ತಗೇರಿ–4, ಮಾನಸಗಲ್–2, ಯರಮರಸ್–1, ಇಟಗಿ–2, ಯಲ್ಲಮ್ಮದೊಡ್ಡಿ–2, ಪಡಲಾರದೊಡ್ಡಿ–1, ಬಸವಣ್ಣ ಮಾನ್ವಿ–1, ಹಿರೇರಯಕುಂಪಿ–1, ಗಾಲೇರದೊಡ್ಡಿ–2, ಬಿ.ನಾಯಕನ ತಂಡ–1, ದೇವದುರ್ಗ–4, ಕ್ಯಾದಿಗೇರ–4, ಬಾಗ್ಯದೇವಿ ತಾಂಡ–1, ಗಂಗಾನಾಯಕ್ ತಾಂಡ–1, ಸಾವಂತಗಲ್–1, ವನಕಾಟಮಳ್ಳಿ–1, ಅಗ್ರಿಕಲ್ಚರಲ್ ಕಾಲೋನಿ ದೇವದುರ್ಗ–1, ಎನ್.ಗಣೇಕಲ್–2, ನೀಲಗಲ್–1, ಮರಕಂದಿನ್ನಿ–1, ತಿಪ್ಪಲದಿನ್ನಿ–1, ಯಲದೊಡ್ಡಿ–1, ಜಾಗಟಕಲ್–1, ಪಲಕನಮರಡಿ–2, ಲಿಂಗದಹಳ್ಳಿ–1 ಬದೇಕೂಡ್ಲಿಗಿ–1,ಜಾಲಹಳ್ಳಿ–8, ಅಂಚಿನಾಳ್–2, ನೀಲದಂಜೆ–2, ಕರೇಗುಡ್ಡ–1, ಜಂಬಲದಿನ್ನಿ–1, ಯರಮಲದೊಡ್ಡಿ–1, ಅಗಸರದೊಡ್ಡಿ–1, ಕುಣಿಕೇರದೊಡ್ಡಿ–1, ಯುಮಲಸಾಲ–1, ಗಲಗ–1, ಕೊತ್ತದೊಡ್ಡಿ–1, ಹಾಕೇರದೊಡ್ಡಿ–1, ಜಾರಬಂಡಿ–1, ಶಂಕರಬಂಡಿ–1, ಶಂಕರಬಂಡಿ ಕ್ರಾಸ್–1, ಹೆಗ್ಗಡದಿನ್ನಿ–1, ನಾಗಡದಿನ್ನಿ–1, ಆಲ್ಕೋಡ್‌ತಾಂಡ–2, ಆಕಳಕುಂಪಿ–1, ಮಲ್ಲಾಮರ್–1, ಹೂವಿನ ಹಡಗಿ–1, ಗಿನ್ನಿ ನಾಯಕ್ ತಾಂಡ–1, ಚೇರಬಂಡಿ–1, ಮಂಚಲೇರದೊಡ್ಡಿ–1, ಆವಂಡಗೇರ–1,

ಗಾಜಲದಿನ್ನಿ–1, ಹೊನ್ನುಟಗಿ–1, ಜಾ.ಜಾಡಲದಿನ್ನಿ–3, ಆಲ್ಕೋಡ್–3, ತಳವಾರದೊಡ್ಡಿ–1, ಪಿಲ್ಲಿಗುಂಡ–2, ಬೆಳ್ಳಿಯಪ್ಪನದೊಡ್ಡಿ–1, ಬಾಲೊಂದಪ್ಪನದೊಡ್ಡಿ, ಜಾಲದಂಡಪ್ಪನದೊಡ್ಡಿ–1, ಜಾಲಹನುಮಂತರಾಯದೊಡ್ಡಿ–1, ಮಲಕಾರದೊಡ್ಡಿ–1, ಹೆಗ್ಗಡದಿನ್ನಿ–1=206

. ಕೊರೆದಿರುವ 206 ಕೊಳವೆ ಬಾವಿಗಳು ಪೂರ್ಣಗೊಡಿರುತ್ತವೆ.

. 206 ಕೊಳವೆ ಬಾವಿಗಳ ಪೈಕಿ 32 ಬಾವಿಗಳ ನೀರಿನ ಮಾಧರಿಗಳನ್ನು ಪರೀಕ್ಷಿಸಲಾಗಿದ್ದು, ಈ ಪೈಕಿ 17 ಕೊಳವೆ ಬಾವಿಗಳ ಗುಣಮಟ್ಟ ಯೋಗ್ಯವಾಗಿದ್ದು, ಉಳಿದ 15 ಕೊಳವೆ ಬಾವಿಗಳ ನೀರಿನ ಗುಣಮಟ್ಟ ಕುಡಿಯಲು ಯೋಗ್ಯವಾಗಿರುವುದಿಲ್ಲವೆಂದು ಕಂಡುಬರುತ್ತದೆ.

. 206 ಕೊಳವೆ ಬಾವಿಗಳ ಪೈಕಿ 191 ಕೊಳವೆ ಬಾವಿಗಳು ಚಾಲನೆಯಲ್ಲಿದ್ದು, 15 ಕೊಳವೆ ಬಾವಿಗಳು ಬಳಕೆಯಲ್ಲಿರುವುದಿಲ್ಲ.

ಶ್ರೀ ಅಲ್ಕೋಡ್ ಹನುಮಂತಪ್ಪ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ 206 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎಂದು ಹೇಳಿದ್ದಾರೆ. ನನ್ನ ಮತಕ್ಷೇತ್ರದಲ್ಲಿ 184 ಹಳ್ಳಿಗಳಿವೆ. ಇವರು 102 ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳುತ್ತಾರೆ. ಇನ್ನು 82 ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲವೆಂದು ಇವರು ಕೊಟ್ಟಿರುವ ಉತ್ತರದಿಂದ ಅರ್ಥವಾಗುತ್ತದೆ. ಆದುದರಿಂದ ಈ 82 ಹಳ್ಳಿಗಳಿಗೆ ಯಾವ ರೀತಿಯಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಾರೆ ಎಂಬ ಬಗ್ಗೆ ಹೇಳಬೇಕು. ಇವರು ಒಟ್ಟು 13 ಯೋಜನೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತಾರೆ. ಇದರಿಂದ 206 ಕೊಳವೆ ಬಾವಿಗಳನ್ನು ಕೊರೆದಿದ್ದೇವೆ ಎಂದು ಹೇಳುತ್ತಾರೆ. ಅದರಲ್ಲಿ ವಿಶೇಷ ಘಟಕ ಯೋಜನೆಯಲ್ಲಿ 38,ಟಿ.ಎಸ್.ಪಿ.ಯಲ್ಲಿ 4, ಇಷ್ಟೆಲ್ಲಾ ಕೊಳವೆ ಬಾವಿಗಳನ್ನು ಕೊರೆದಿದ್ದೇವೆ ಎಂದು ಹೇಳುತ್ತಾರೆ. ಈ ವಿಶೇಷ ಘಟಕ ಯೋಜನೆಯಡಿಯಲ್ಲಿ ಏನು ಕೊಳವೆ ಬಾವಿಗಳನ್ನು ಕೊರೆದಿದ್ದೇವೆ ಎಂದು ಇವರು ಹೇಳುತ್ತಾರೆ ಅದನ್ನು ಯಾವ ಯಾವ ಗ್ರಾಮಗಳಲ್ಲಿ ಇವು ವಿಶೇಷ ಘಟಕ ಯೋಜನೆಯಡಿಯಲ್ಲಿ ಮತ್ತು ಟಿ.ಎಸ್.ಪಿ.ಯಲ್ಲಿ ಕೊಳವೆ ಬಾವಿಗಳನ್ನು ಕೊರೆದಿದ್ದಾರೆ ಮತ್ತು ಅದಕ್ಕೆ ಖರ್ಚಾಗಿರತಕ್ಕಂಥ ಹಣವೆಷ್ಟು ಎಂಬ ಬಗ್ಗೆ ಹೇಳಬೇಕೆಂದು ಕೇಳಲಿಚಿಸುತ್ತೇನೆ. ಇವುಗಳ ಬಗ್ಗೆ ಮಂತ್ರಿಗಳು ಉತ್ತರ ಕೊಟ್ಟಮೇಲೆ ಮತ್ತೆ ಒಂದೆರಡು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಕೇಳೀಕೊಳ್ಳುತ್ತೇನೆ.

ಅಧ್ಯಕ್ಷರು : ನೀವು ಪ್ರಶ್ನೆಗಳನ್ನು ಸಂಕ್ಷಿಪ್ತವಾಗಿ ಕೇಳಿದರೆ ಪ್ರಶ್ನೋತ್ತರ ಬೇಗ ಮುಗಿಯುತ್ತದೆ. ಎಲ್ಲರ ಪ್ರಶ್ನೆಗೂ ಉತ್ತರ ಸಿಗುತ್ತದೆ. ಅದನ್ನು ಬಿಟ್ಟು ನೀವೇ ಉತ್ತರದಲ್ಲಿ ಹಾಗೆ ಹೇಳಿದ್ದಾರೆ, ಹೀಗೆ ಹೇಳಿದ್ದಾರೆ ಎಂದರೆ ಪ್ರಶ್ನೋತ್ತರ ಹೇಗಾಗುತ್ತದೆ?

ಶ್ರೀ ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, 184 ಹಳ್ಳಿಗಳಲ್ಲಿ 206 ಕೊಳವೆ ಬಾವಿಗಳನ್ನು ಕೊರೆದಿದ್ದೇವೆ ಎಂದು ಉತ್ತರಕೊಟ್ಟಿದ್ದೇವೆ. ಯಾವ ಯಾವ ಊರುಗಳಲ್ಲಿ ಕೊರೆದಿಲ್ಲ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿಲ್ಲ. ಎಲ್ಲಾ ಊರುಗಳಿಗೂ ಕುಡಿಯುವ ನೀರನ್ನು ಕೊಡಲೇಬೇಕು. ಅದು ನಮಗೆ ಗೊತ್ತು. ಒಟ್ಟು ಈಗ 184 ಹಳ್ಳಿಗಳಲ್ಲಿ 206 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಯಾವ ಯಾವ ಊರಿನಲ್ಲಿ ಕೊರೆಯಲಾಗಿಲ್ಲ ಎನ್ನುವ ಬಗ್ಗೆ ಪಟ್ಟಿಯನ್ನು ತಾವು ಕಳುಹಿಸಿ. ನಾನು ಕೊರೆಸುವುದಕ್ಕೆ ತಯಾರಾಗಿದ್ದೇನೆ. ಇನ್ನು ವಿಶೇಷ ಘಟಕ ಯೋಜನೆಯಲ್ಲಿ 20 ಕೊಳವೆ ಬಾವಿಗಳನ್ನು ಕೊರೆಸಿದ್ದೇವೆ.

ಪ್ರತಿಯೊಂದು ಹಳ್ಳಿಗಳ ಹೆಸರು ಹಾಕಿ ಯೋಜನಾವಾರು ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಈಗಾಗಲೇ ಒದಗಿಸಿದ್ದೇವೆ.

ಶ್ರೀ ಅಲ್ಲೋಡ್ ಹನುಮಂತಪ್ಪ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರಲ್ಲಿ ಏನು ಪ್ರಶ್ನೆ ಕೇಳಿದ್ದೆನೆಂದರೆ ಇದರಲ್ಲಿ ಬಹಳ ಭ್ರಷ್ಟಾಚಾರ ನಡೆದಿದೆ ಎಂದು ಹೇಳಿರುವುದಕ್ಕೆ ಅವರು ಭ್ರಷ್ಟಾಚಾರ ನಡೆದಿಲ್ಲವೆಂದು ಹೇಳಿದರು. ಆದರೆ ಕೆಲವು ಕೊಳವೆ ಬಾವಿಗಳನ್ನು ಕೊರೆಯದೆಯೇ ಕೊರದಿದ್ದೇವೆ ಎನ್ನತಕ್ಕಂಥ ಮಾಹಿತಿಯನ್ನು ಕೊಟ್ಟಿದ್ದಾರೆ. ನಾನು ಆ ಕ್ಷೇತ್ರದ ಶಾಸಕ. ಪ್ರತಿಯೊಂದು ಗ್ರಾಮಗಳಲ್ಲೂ ನಾನು ತಿರುಗಾಡಿ ಬಂದಿದ್ದೇನೆ. ಸುಮಾರು ಹತ್ತು-ಹನ್ನೆರಡು ಗ್ರಾಮಗಳಲ್ಲಿ ಕೊಳವೆ ಬಾವಿಗಳನ್ನು ಕೊರೆದಿಲ್ಲ. ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ. ಆದರೆ ಉತ್ತರದಲ್ಲಿ ಕೊರೆದಿದ್ದೇವೆ ಎನ್ನತಕ್ಕಂಥ ಮಾಹಿತಿಯನ್ನು ಕೊಡುತ್ತಾರೆ. ಆದರೆ ನನಗೆ ಗೊತ್ತಿರುವಂತೆ ಪಲಕನಮರ್ಡಿ, ಸುಲದಗುಡ್ಡ, ಸಲಿಕ್ಯಾಪುರ, ಸಾವಂತಗೇರಿ, ಹೀಗೆ ಇಂಥ ಅನೇಕ ಸುಮಾರು ಹತ್ತು, ಹನ್ನೆರಡು ಹಳ್ಳಿಗಳಲ್ಲಿ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ಕೊಳವೆ ಬಾವಿಗಳನ್ನು ಕೊರೆದಿಲ್ಲ. ಆದರೆ ಮಾಹಿತಿಯಲ್ಲಿ ನನಗೆ ಕೊರೆದಿದ್ದೇವೆ ಎಂದು ಹೇಳಿದ್ದಾರೆ. ಸಂಪೂರ್ಣವಾದ ಮಾಹಿತಿ ನಾನು ಏಕೆ ಕೇಳಿದೆನೆಂದರೆ ನಾನೂ ಕೂಡ ಆ ಕ್ಷೇತ್ರದ ಶಾಸಕನಾಗಿದ್ದೇನೆ. ಅನೇಕ ಕಡೆ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ನನಗೆ ದೂರುಗಳು ಬಂದಿರುವುದರಿಂದ ನಾನು ಇದನ್ನು ಕೇಳಿದ್ದೇನೆ. ಆದರೆ ಇವರು 206 ಕೊಳವೆ ಬಾವಿಗಳನ್ನು ಕೊರೆದಿದ್ದೇವೆ ಎಂದು ಹೇಳಿದ್ದಾರೆ. ಈ 206ರ ಬಗ್ಗೆ ಮೊದಲೇ ನಾನು ಅಧಿಕಾರಿಗಳ ಹತ್ತಿರ ಮಾಹಿತಿ ಕೇಳಿದರೆ ಅಧಿಕಾರಿಗಳು ಮಾಹಿತಿ ಕೊಡಲಿಲ್ಲ. ಸದನದಲ್ಲಿ ಪ್ರಶ್ನೆ ಕೇಳಿದ್ದೇನೆ. ಎನ್ನುವ ಕಾರಣಕ್ಕಾಗಿ ನನಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಇದರಲ್ಲಿ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ಸುಮಾರು 15 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸರಬರಾಜು ಮಾಡಿದ್ದೇವೆ ಎಂದು ಹೇಳುತ್ತಾರೆ. ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ಕೊರೆದಿಲ್ಲವೆಂದು ನಾನು ತಮ್ಮ ಮೂಲಕ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಆದಕಾರಣ ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ, ಇದರ ಬಗ್ಗೆ ಸಮಗ್ರವಾದ ರೀತಿಯಲ್ಲಿ ತನಿಖೆಯನ್ನು ಮಾಡಬೇಕು. ಈಗ ಏನು ತಪ್ಪು ಮಾಹಿತಿಯನ್ನು ಸದನಕ್ಕೆ ಕೊಟ್ಟಿದ್ದಾರಲ್ಲಾ ಅಂಥ ಅಧಿಕಾರಿಯ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಬೇಕು ಮತ್ತು ಅವರನ್ನು ಶಿಕ್ಷೆಗೆ ಒಳಪಡಿಸಬೇಕು ಎನ್ನುವ ಮನವಿಯನ್ನು ಮಾನ್ಯ ಸಭಾದ್ಯಕ್ಷರ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರೆ, ಅವರೇನೋ ತನಿಖೆ ಮಾಡಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಬಿ.ಸತ್ಯನಾರಾಯಣ(ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲಿ ಏನು ಅವ್ಯವಹಾರ ಆಗಿದೆ ಎನ್ನುವುದರ ಬಗ್ಗೆ ನಮ್ಮ ಇಲಾಖೆಗೆ ಯಾವುದೇ ವಿಧವಾದ ಕಂಪ್ಲೈಂಟ್ ಬಂದಿಲ್ಲ. ಮಾನ್ಯ ಶಾಸಕರು ನಿಜವಾಗಲೂ ಏನಾದರೂ ಅಂಥದ್ದು ಇದ್ದರೆ ನನಗೆ ಮಾಹಿತಿ ತಲುಪಿಸಿದರೆ ತಪ್ಪು ಮಾಡಿರುವ ಅಧಿಕಾರಿಗಳ ಮೇಲೆ ಕಾನೂನು ಪ್ರಕಾರ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.